## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 72/2019

**ಸಾಕ್ಷಿಯನ್ನು ದಿಃ 21.06.2023 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಸಯ್ಯದ್ ರಫೀ | ಸಿಡಬ್ಲ್ಯೂ:8 | ಪಿಡಬ್ಲ್ಯೂ:8 |
| ತಂದೆಯ ಹೆಸರು | ಸಯ್ಯದ್ ಇಬ್ರಾಹಿಂ | | |
| ವಯಸ್ಸು | 51 ವರ್ಷ | | |
| ಕೆಲಸ | ಕಲಾಕಾರರು | | |
| ವಾಸಸ್ಥಳ | ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಿಪಿ. 4 ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 4(ಸಿ) ಎಂದು ಗುರುತಿಸಲಾಯಿತು. 2019 ರಲ್ಲಿನಮ್ಮ ಅಂಗಡಿ ಮತ್ತು ಇತರೆಯವರ ಅಂಗಡಿಯಲ್ಲಿ ಕಳ್ಳತನವಾದಾಗ ಪೊಲೀಸರು ನಮ್ಮ ಅಂಗಡಿ ಹತ್ತಿರ ಬಂದು ಕಳ್ಳತನವಾದ ವಿಚಾರದ ಬಗ್ಗೆ ಸಾಕ್ಷಿಯಾಗಿ ಸಹಿ ಮಾಡಲು ಕೋರಿಕೊಂಡ ಮೇರೆಗೆ ಈ ಸಹಿಯನ್ನು ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 6 ರವರು ಹಾಜರಿದ್ದು,ಅವರು ಸಹ ಸಹಿ ಮಾಡಿರುತ್ತಾರೆ. ಈ ಸಹಿಯನ್ನು ಯಾವ ಸಮಯದ್ಲಿ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ. ನಿಪಿ. 4 ರಲ್ಲಿ ಬರೆದಿರುವ ಯಾವುದೆ ವಿಚಾರ ನನಗೆ ತಿಳಿದಿರುವುದಿಲ್ಲ. ಪೊಲೀಸರು ಆ ಸಮಯದಲ್ಲಿ ನನ್ನ ಸಮಕ್ಷಮ ಏನು ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ

ನುಡಿದಿರುವ ಕಾರಣ ಅವರನ್ನು  ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು  ಸಸಅ ರವರಿಂದಃ–**

ದಿಃ 02.06.2018 ರಂದು ಪಿರಿಯಾಪಟ್ಟಣದ ಟೌನ್ ನಲ್ಲಿರುವ ಬಿ.ಎಂ. ರಸ್ತೆಯಲ್ಲಿರುವ ನಾತುಲಾಲ್ ಅರ್ಜಿನ್ ಲಾಲ್ ಜೈನ್ ಪಾನ್ ಬ್ರೋಕರ್ ಅಂಗಡಿಯಲ್ಲಿ ಪೊಲೀಸರು ಆರೋಪಿಗಳನ್ನು ಕರೆದುಕೊಂಡು ಬಂದು ಕಳ್ಳತನವಾಗಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಅಮಾನತ್ತು ಮಹಜರ್ ಜರುಗಿಸುವ ಸಂಬಂಧ ಈ ಮಹಜರ್ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ 9 ಮತ್ತು ಆರೋಪಿಗಳು ಹಾಜರಿದ್ದು, ಅವರು ಸಹ ಈ ಮಹಜರ್ ಗೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಮಹಜರ್ ಅನ್ನು ಮಧ್ಯಾಹ್ನ 1 ರಿಂದ 2 ಗಂಟೆ ವರೆಗೆ ಜರುಗಿಸಲಾಯಿತು ಎಂದರೆ ಸರಿಯಲ್ಲ. ಈ ಮಹಜರ್ ಮಾಡುವ ಸಮಯದಲ್ಲಿ ಪೊಲೀಸರು ನಮ್ಮ ಸಮಕ್ಷಮ **1.** 5.050 ಗ್ರಾಂ ತೂಕದ ಹರಳಿನ ಉಂಗುರ, **2.** 1 ಗ್ರಾಂ 608 ಮಿಲಿ ತೂಕದ ಚಿನ್ನದ ಉಂಗುರ, **3.** 2 ಗ್ರಾಂ 730 ಮಿಲಿ ತೂಕದ ಕಿವಿಯ ರಿಂಗ್‌ಗಳು, **4.** 7 ಗ್ರಾಂ 900 ಮಿಲಿ ತೂಕದ ಚಿನ್ನದ ಚೈನು ಇವುಗಳನ್ನು ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ.ಈ ಮಹಜರ್ ನಲ್ಲಿರುವ  ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಆರೋಪಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಃ ಇಲ್ಲ**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.